# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ :** 2016ನೇ ಸಾಲಿಗೆ ಎಸ್.ಸಿ.ವಿ.ಟಿ ಅಡಿಯಲ್ಲಿ ಅರ್ಜಿ ಆಹ್ವಾನಿಸಲು ಸಂಯೋಜನಾ ಶುಲ್ಕ ನಿಗಧಿಪಡಿಸುವ ಕುರಿತು.

**ಓದಲಾಗಿದೆ:** ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ: ಉತಇ/ತರಬೇತಿ/ಸಂ/ವಿವ-32/2015-16, ದಿನಾಂಕ: 11/01/2016.

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಇವರ ಪತ್ರದಲ್ಲಿ 2016ನೇ ಸಾಲಿಗೆ ಎಸ್.ಸಿ.ವಿ.ಟಿ ಅಡಿಯಲ್ಲಿ ಅರ್ಜಿ ಆಹ್ವಾನಿಸಲು ಸಂಯೋಜನಾ ಶುಲ್ಕ ನಿಗಧಿಪಡಿಸಲು ದಿನಾಂಕ: 04/11/2015 ರಂದು ಮಾನ್ಯ ಕಾರ್ಮಿಕ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಈ ಹಿಂದೆ ಜಾರಿಯಲ್ಲಿದ್ದ ಸಂಯೋಜನಾ ಶುಲ್ಕ ಪ್ರತಿ ವೃತ್ತಿ / ಘಟಕಕ್ಕೆ ರೂ.10,000/- ಗಳನ್ನು ರೂ.25,000/- ಗಳಿಗೆ ಹೆಚ್ಚಿಸಲು ಹಾಗೂ ಎಸ್‌ಸಿವಿಟಿ ಅಡಿಯಲ್ಲಿ ಸಂಯೋಜನೆಯನ್ನು 04 ವರ್ಷಗಳಿಗೊಮ್ಮೆ ಕೈಗೊಳ್ಳುವಂತೆಯೂ ಆದೇಶಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಎಸ್‌ಸಿವಿಟಿ ಸಂಯೋಜನಾ ಶುಲ್ಕವನ್ನು 2016ನೇ ಸಾಲಿನಿಂದ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರತಿ ವೃತ್ತಿ / ಘಟಕಗಳಿಗೆ ರೂ.25,000/- ಎಂದು ನಿಗದಿಗೊಳಿಸಿ, ಸಂಯೋಜನೆಯನ್ನು ಪ್ರತಿ 4 ವರ್ಷಗಳಿಗೊಮ್ಮೆ ಕೈಗೊಳ್ಳುವಂತೆ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ ಕಾಇ 24 ಇಟಿಐ 2016, ಬೆಂಗಳೂರು, ದಿನಾಂಕ: 03/05/2016.

2016ನೇ ಸಾಲಿನಿಂದ ಎಸ್‌ಸಿವಿಟಿ (State Council for Vocational Training) ಸಂಯೋಜನಾ ಶುಲ್ಕವನ್ನು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರತಿ ವೃತ್ತಿ / ಘಟಕಗಳಿಗೆ ರೂ.25,000/- (ರೂಪಾಯಿ ಇಪ್ಪತ್ತೈದು ಸಾವಿರಗಳು ಮಾತ್ರ) ಗಳಿಗೆ ನಿಗಧಿಪಡಿಸಲು ಹಾಗೂ ಸಂಯೋಜನೆಯನ್ನು ಪ್ರತಿ 4 ವರ್ಷಗಳಿಗೊಮ್ಮೆ ಕೈಗೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಆಇ 69 ವೆಚ್ಚ-9/2016, ದಿನಾಂಕ: 02/04/2016ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಪ್ರಕಾಶ್)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಉದ್ಯೋಗ ಮತ್ತು ತರಬೇತಿ)

7/5/2016

ಇವರಿಗೆ:

1) ಮಹಾಲೇಖಪಾಲರು, (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು.

--2

3) ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ.
4) ಜಂಟಿ ನಿರ್ದೇಶಕರು, ರಾಜ್ಯಹುಜೂರ್ ಖಜಾನೆ, ಬೆಂಗಳೂರು.
5) ಉಪನಿರ್ದೇಶಕರು, ಖಜಾನೆ ಎನ್.ಎಂ.ಸಿ., ಖನಿಜಭವನ, ರೇಸ್‌ಕೋರ್ಸ್‌ರೋಡ್, ಬೆಂಗಳೂರು.
6) ಮಾನ್ಯ ಕಾರ್ಮಿಕ ರಾಜ್ಯ ಸಚಿವರ ಆಪ್ತಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಧಾನಸೌಧ.
7) ಸರ್ಕಾರದ ಅಧೀನಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-9, ವಿಧಾನಸೌಧ.
8) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
9) ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತಸಹಾಯಕರು, ಕಾರ್ಮಿಕ ಇಲಾಖೆ.
10) ಸ್ವೀಕೃತಿ ಮತ್ತು ರವಾನೆ ಶಾಖೆ, ಕಾರ್ಮಿಕ ಇಲಾಖೆ.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.